International Journal of Kannada Research
www.kannadajournal.com

ISSN: 2454–5813
IJKR 2024; 10(1): 34-37
© 2024 IJKR
www.kannadajournal.com
Received: 09-12-2023
Accepted: 13-01-2024

**ಕಿಮ್ಮುಕಾ ಇಪಿ**
ಕನ್ನಡದಲ್ಲಿ ಉಪನ್ಯಾಸ, ಶೇಷಾದ್ರಿಪುರಂ ಪ್ರಿ ಯೂನಿವರ್ಸಿಟಿ ಕಾಲೇಜು, ತುಮಕೂರು, ಕರ್ನಾಟಕ, ಭಾರತ

**Corresponding Author:**
**ಕಿಮ್ಮುಕಾ ಇಪಿ**
ಕನ್ನಡದಲ್ಲಿ ಉಪನ್ಯಾಸ, ಶೇಷಾದ್ರಿಪುರಂ ಪ್ರಿ ಯೂನಿವರ್ಸಿಟಿ ಕಾಲೇಜು, ತುಮಕೂರು, ಕರ್ನಾಟಕ, ಭಾರತ

# ಕಾಳಾಪುರದ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಜಾತ್ರಾ ಮಹೋತ್ಸವದ: ಒಂದು ಅಧ್ಯಯನ

**ಕಿಮ್ಮುಕಾ ಇಪಿ**

**ಪೀಠಿಕೆ**

ಭಾರತ ಕೃಷಿ ಪ್ರಧಾನ ದೇಶ, ಕೃಷಿಯೇ ರೈತರ ಜೀವನಾಡಿ ಕೃಷಿ ಕಾರ್ಯದಲ್ಲಿ ತನ್ನನ್ನು ತಾನು ಅರ್ಪಿಸಿಕೊಂಡ ರೈತನೇ ನಮ್ಮೆಲ್ಲರ ಅನ್ನದಾತ, ಶ್ರಮಜೀವಿಯಾದ ರೈತ ಕೃಷಿ ಕಾಯಕದ ಜೊತೆ ಸಂಪ್ರದಾಯ, ಆಚರಣೆ, ನಂಬಿಕೆ, ಮನರಂಜನೆ, ಹೀಗೆ ಅನೇಕ ಸಂಸ್ಕೃತಿಯನ್ನು ತನ್ನಲ್ಲಿ ಅಳವಡಿಸಿಕೊಂಡಿದ್ದಾನೆ. ಕಾಯಕ ಯೋಗಿಯಾದ ರೈತ ತನ್ನ ಕಾಯಕವಾದ ಕೃಷಿಯನ್ನು ನಿಷ್ಠಾವಂತನಾಗಿ ಮಾಡುತ್ತಾ ತನ್ನ ಇಡೀ ಜೀವನದ ಶ್ರಮವನ್ನು ಭೂತಾಯಿಗೆ ಅರ್ಪಿಸುವಂತಹ ನಿಸ್ವಾರ್ಥಿ, ರೈತ ತನ್ನ ಜೀವನದಲ್ಲಿ ಅತ್ಯಂತ ಭಕ್ತಿ ಭಾವದಿಂದ ದೇವರ ಮೊರೆ ಹೋಗುತ್ತಾನೆ.

ಪ್ರಕೃತಿಯಲ್ಲಿ ನಡೆಯುವ ಪ್ರತಿ ಘಟನೆಯು ತುಂಬಾ ಭಯ ಭಕ್ತಿಯಿಂದ ವಿವೇಚನಶೀಲನಾಗಿ ನೋಡುತ್ತಾನೆ. ಇಡೀ ವರ್ಷ ತನ್ನ ಕೃಷಿ ಕಾಯಕದಲ್ಲಿ ತೊಡಗಿಕೊಂಡು ಬೆಳೆ ಬೆಳೆದ ಫಸಲನ್ನು ರಾಶಿ ಹಾಕಿ ಸುಗ್ಗಿ ಪೂಜೆ ಮಾಡುವ ಪದ್ಧತಿ ರೈತಾಪಿ ಜನರ ಸಂಸ್ಕೃತಿ, ರೈತ ತನ್ನ ಸಂಸ್ಕೃತಿಯಲ್ಲಿ ಜಾತ್ರೆ ದೇವರ ಉತ್ಸವಗಳನ್ನು ಆಚರಿಸುತ್ತಾ ಒಂದು ಸಂಪ್ರದಾಯವಾಗಿ ಪರಂಪರೆಯಿಂದ ಮಾಡಿಕೊಂಡು ಬಂದಿದ್ದಾನೆ. ಹೀಗೆ ದೇವರ ಸೇವೆಯ ಜೊತೆಯಲ್ಲಿ ತನ್ನ ಸಂಕಷ್ಟಗಳನ್ನ ಹಂಚಿಕೊಂಡು ಬಂದಿದ್ದಾನೆ. ಜನಪದರಲ್ಲಿ ದೇವರ ಬಗೆಗೆ ಆಚರಣೆ ನಂಬಿಕೆಗಳಿಗೆ ಅನೇಕ ನೈಜ ಘಟನೆಗಳ ಕಾರಣಗಳನ್ನು ನಂಬಿ ಬದುಕಿನಲ್ಲಿ ದೇವರನ್ನು ನಂಬುತ್ತಿದ್ದರು ಹಾಗೂ ಈಗಲೂ ನಂಬುತ್ತಿರುವರು. ಒಟ್ಟಿನಲ್ಲಿ ರೈತರು ದೇವರ ಬಗೆಗೆ ನಂಬಿಕೆ, ಆಚರಣೆ, ಭಕ್ತಿ, ಉತ್ಸವಗಳನ್ನು ಪರಂಪರೆಯಿಂದ ಅನುಸರಿಸುತ್ತಾ ಬಂದಿದ್ದಾರೆ.

ರೈತನ ಬದುಕಿನಲ್ಲಿ ಕಷ್ಟದ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಯನ್ನು ಪರಿಹರಿಸಲು ದೇವರ ಮೊರೆ ಹೋಗುವಂಥದ್ದು ಸಹಜ ರೈತನ ಜೀವನಾಡಿಯಾಗಿರುವ ಎತ್ತುಗಳು ಸಹ ಇಲ್ಲಿ ದೇವರ ಪ್ರತಿರೂಪವಾಗಿ ಪೂಜಿಸಲ್ಪಡುತ್ತವೆ ಕಾಣಬಹುದು ಜಾತ್ರೆ ಹಳ್ಳಿಗರ ಜೀವನದ ಒಂದು ಭಾಗವಾಗಿದೆ. ಜಾತ್ರೆ ಎಂದರೆ ಎಲ್ಲರಿಗೂ ಸಡಗರ ಸಂಭ್ರಮದ ತಾಣ ಎಷ್ಟೋ ಸಂಬಂಧಗಳು ಒಂದಾಗುವ ಐಕ್ಯ ಸ್ಥಳವಾಗಿದೆ. ಜಾತ್ರೆ ಕೇವಲ ಧಾರ್ಮಿಕ ಕೇಂದ್ರವಷ್ಟೇ ಅಲ್ಲ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕೇಂದ್ರಗಳಾಗಿ ಜನರ ಮನ್ನಣೆಗಳಿಸಿದೆ.

ಧಾರ್ಮಿಕ ಕ್ಷೇತ್ರಗಳಾದ ಈ ಜಾತ್ರೆಗಳು ಮಾನವ ಸಮುದಾಯದ ಕಲ್ಯಾಣವನ್ನೇ ಬಯಸುವುದರ ಜೊತೆಗೆ ಆತ್ಮೀಯ ಸಂಬಂಧವನ್ನು ಬೆಸೆಯುವಂತ ಪ್ರಯತ್ನ ನಡೆಯುತ್ತಿವೆ. ದೇವರನ್ನು ಒಲಿಸಿಕೊಳ್ಳಲು ಇರುವ ಮಾರ್ಗವೇ ಹರಕೆಯನ್ನು ದೇವರಿಗೆ ಸಮರ್ಪಿಸುವುದು. ಜನರ ಅನುಕೂಲಗಳಿಗೆ ತಕ್ಕಂತೆ ಹರಕೆಗಳನ್ನ ದೇವರಿಗೆ ಅರ್ಪಿಸುವುದರ ಮೂಲಕ ದೇವರ ಕೃಪೆಗೆ ಪಾತ್ರರಾಗುತ್ತಾರೆ. ಹೀಗೆ ವೈವಿಧ್ಯಮಯ ಆಚರಣೆಗಳನ್ನು ರೂಢಿಸಿಕೊಂಡಿದ್ದಾರೆ.ಜಾತ್ರೆಗಳ ಮೂಲಕ ದೇವರ ಬಗ್ಗೆ ಭಕ್ತಿ ಶ್ರದ್ಧೆ ,ನಿಷ್ಠೆಯನ್ನು ಹೊಂದಿರುವವರಾಗಿರುತ್ತಾರೆ.

ಇಡೀ ಗ್ರಾಮ ಜಾತ್ರೆಯ ವೈಭವದ ಸಡಗರ ಸಂಭ್ರಮದಲ್ಲಿ ಕಂಗೊಳಿಸುತ್ತಿರುತ್ತದೆ.ಹಾಗಯೇ ಮನೆಯಲ್ಲಿ ನೆಂಟರು, ರಕ್ತ ಸಂಬಂಧಿಗಳು, ಸ್ನೇಹಿತರು ಎಲ್ಲ ಸೇರಿ ಹಬ್ಬದ ವಾತಾವರಣ ನಿರ್ಮಾಣವಾಗಿರುತ್ತದೆ ಈ ಸಡಗರ ಸಂಭ್ರಮದಲ್ಲಿ ಜನರ ಸಂತೋಷ ಮುಗಿಲು ಮುಟ್ಟಿರುತ್ತದೆ.

ಕಾಳಾಪುರ ಗ್ರಾಮವು ಕಳ್ಳಂಬೆಳ್ಳ ದಿಂದ 8.ಕಿಲೋಮೀಟರ್ ಸಿರಾ ಪಟ್ಟಣದಿಂದ 20 ಕಿಲೋಮೀಟರ್ ಹಾಗೂ ನಮ್ಮೂರು ಚಿಕ್ಕನಹಳ್ಳಿ ಯಿಂದ 10. ಕಿಲೋಮೀಟರ್ ದೂರದಲ್ಲಿದ್ದು ಕಂದಾಯ ಗ್ರಾಮವಾಗಿದೆ, ಹಿಂದೆ ಈ ಗ್ರಾಮವನ್ನು ಕಾಳಿನಪುರ ಎಂದು ಕರೆಯಲಾಗುತ್ತಿತ್ತು. ಈಗ ಕಾಳಾಪುರ ಎಂದು ರೂಢಿಯಾಗಿದೆ. ಈ ಪ್ರದೇಶವು ಫಲವತ್ತಾಗಿದ್ದು ನೀರಾವರಿ ಸೌಕರ್ಯವಿಲ್ಲದೆ ಖುಷ್ಕಿ ಜಮೀನಿನಿಂದ ಕೂಡಿದ್ದು ಇಲ್ಲಿನ ಜಮೀನಿನ ಮಣ್ಣು ಬಹಳ ಫಲವತ್ತಾಗಿದ್ದು ಇಲ್ಲಿನ ರೈತರು ಈ ಜಮೀನಿನಲ್ಲಿ ಮಳೆ ನೀರಿನ ಆಸರೆಯಲ್ಲಿ ಹೆಚ್ಚಾಗಿ ಜೋಳ, ಶೇಂಗಾ, ಅವರೇ, ಅಲಸಂದೆ, ಹೆಸರು, ಉದ್ದು, ಆರ್ಕ, ಸಾವೆ, ಕೊರಲೆ, ಹುಚ್ಚೆಳ್ಳು, ಸಜ್ಜೆ, ಮುಂತಾದ ಬೆಳೆಗಳನ್ನು ಬಿತ್ತನೆ ಸಲುವಾಗಿ ಸಮೃದ್ಧವಾಗಿ ಬೆಳೆಯುತ್ತಿದ್ದರು. ಸುಗ್ಗಿಯಕಾಲದಲ್ಲಿ ರೈತರು ಮೇಲ್ಕಂಡ ಬಿತ್ತನೆ ಬೀಜಗಳನ್ನು ಕಣಜ, ವಾಡೆಗಳಲ್ಲಿ , ಮುಂಗಾರಿನಲ್ಲಿ ಶಿರಾ ತಾಲೂಕಿನಲ್ಲಿ ಅನೇಕ ರೈತರು ಬಿತ್ತನೆಯ ಅಕ್ಕಡಿ ಕಾಳುಗಳಾದ ಅವರೇ, ತೊಗರಿ, ಹೆಸರು, ಉದ್ದು, ಇನ್ನು ಮುಂತಾದ ಬಿತ್ತನೆ ಬೀಜಗಳನ್ನು ಕೊಂಡುಕೊಂಡು ತಮ್ಮ ಹೊಲಗಳಲ್ಲಿ ಬಿತ್ತನೆ ಮಾಡುತ್ತಿದ್ದಾರೆ ಆದ್ದರಿಂದ ಈ ಬಿತ್ತನೆ ಕಾಳಿಗೆ ಹಿಂದಿನಿಂದಲೂ ಹೆಸರುವಾಸಿಯಾಗಿರುವ ಈ ಕಾಳಿನ ಪುರವು "ಕಾಳಾಪುರ" ಆಯಿತೆಂದು ಈ ಗ್ರಾಮದ ಹಿರಿಯರಾದ ಶಂಕರನಾರಾಯಣ ರಾವ್ ತಿಳಿಸಿರುತ್ತಾರೆ.

ಈ ಊರಿನ ಬಿತ್ತನೆ ಕಾಳಿನ ಬೇಡಿಕೆಗೆ ಶ್ರೀ ಲಕ್ಷ್ಮಿ ರಂಗನಾಥನ ಮಹಿಮೆಯು ಇನ್ನೊಂದು ಕಾರಣವೇನೆಂದರೆ ಸ್ವಾಮಿ ಜಾತ್ರಾ ಮಹೋತ್ಸವದ ಮೊದಲ ದಿನ ನಡೆಯುವ ಅಂಕುರಾರ್ಪಣೆ ಸೇವೆಯಲ್ಲಿ ಎಲ್ಲಾ ನವಧಾನ್ಯಗಳನ್ನು ಗೊಬ್ಬರ ಮತ್ತು ಹುತ್ತದ ಮಣ್ಣಿನಿಂದ ಮಿಶ್ರಣ ಮಾಡಿ ಏಳು ದಿನಗಳ ಕಾಲ ಸ್ವಾಮಿಗಳ ಸನ್ನಿಧಿಯಲ್ಲಿ ಯಾಗ ಶಾಲೆಯಲ್ಲಿ ಇರಿಸಿ ಜಾತ್ರೆಯ ಕೊನೆಯ ದಿವಸ ಯಾವ ಧಾನ್ಯಗಳು ಹೆಚ್ಚಾಗಿ ಮೊಳಕೆ ಅಂದರೆ ಅಂಕುರ ಬಂದಿರುವುದನ್ನು ಖಚಿತಪಡಿಸಿಕೊಂಡು ಆ ವರ್ಷ ಈ ಧಾನ್ಯಗಳ ಬೆಳೆಯು ಹುಲಸಾಗಿ ಬೆಳೆದು ಪಸಲು ಸಮೃದ್ಧಿಯಾಗಿ ಬರುತ್ತದೆ ಎಂಬ ನಂಬಿಕೆಯಿಂದ ಶಿರಾ ತಾಲೂಕಿನ ರೈತರುಗಳು ಕಾಳಾಪುರ ಗ್ರಾಮದ ರೈತರುಗಳು ಶೇಖರಿಸಿ ಇಟ್ಟಿರುವ ಬಿತ್ತನೆ ಬೀಜಗಳನ್ನು ಸ್ವಾಮಿಯ ಆಶೀರ್ವಾದ ಎಂದು ಮುಂಗಾರು ಬಿತ್ತನೆಗೆ ತೆಗೆದುಕೊಂಡು ಹೋಗಿ ತಮ್ಮ ಹೊಲಗಳಲ್ಲಿ ಬಿತ್ತನೆ ಮಾಡುವುದನ್ನು ಇಂದಿಗೂ ರೂಡಿಸಿಕೊಂಡಿದ್ದಾರೆ.

ಗ್ರಾಮದಲ್ಲಿ ಸರ್ಕಾರಿ ಹಿರಿಯ ಮಾಧ್ಯಮಿಕ ಶಾಲೆ, ಪ್ರೌಢಶಾಲೆ, ಗ್ರಾಮ ಲೆಕ್ಕಾಧಿಕಾರಿಗಳ ಕಚೇರಿ, ಅಂಗನವಾಡಿ ಕೇಂದ್ರಗಳು, ಕೆಲಸ ನಿರ್ವಹಿಸುತ್ತಿವೆ. ಈ ಗ್ರಾಮದ ಶಿವಲಿಂಗಯ್ಯ ಎಂಬುವವರು ಭಾರತೀಯ ವಾಯುದಳದ ಚೀಫ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ಕ್ರಿ.ಶ1750ರಲ್ಲಿ ಈ ಗ್ರಾಮದ ಸರಸ ಭಾರತಿ ಕೋನಯ್ಯ ಎಂಬ ವಿದ್ವಾಂಸರು ಕೃಷ್ಣಾರ್ಜುನರ ಸಂಗರ ಎಂಬ ಭಾಮಿನಿ ಷಟ್ಪದಿಯ ಗ್ರಂಥವನ್ನು ರಚಿಸಿ ಪ್ರಸಿದ್ಧಿಯಾಗಿದ್ದರು ಈಗಲೂ ಇವರ ವಂಶಸ್ಥರು ಕಾಳಾಪುರ ಗ್ರಾಮದಲ್ಲಿ ವಾಸವಾಗಿದ್ದಾರೆ.

ಈ ಗ್ರಾಮದಲ್ಲಿ ಲಕ್ಷ್ಮಿ ರಂಗನಾಥಸ್ವಾಮಿ ದೇವಸ್ಥಾನ ಹಾಗೂ ಮಾರಮ್ಮನ ಪೌಳಿ ಇರುತ್ತದೆ. ಗ್ರಾಮದ ಹೊರಗೆ ಕೊಲ್ಲಾಪುರದಮ್ಮನ ಪೌಳಿ ಇರುತ್ತದೆ. ವರ್ಷಕ್ಕೊಮ್ಮೆ ಶಿವರಾತ್ರಿ ಹಬ್ಬ ವಾದ 15 ದಿನಗಳ ನಂತರ ಕಾಮನ ಹುಣ್ಣಿಮೆಯಲ್ಲಿ ಸ್ವಾಮಿಗೆ ಬ್ರಹ್ಮರಥೋತ್ಸವ ನಡೆಯುತ್ತದೆ. ಕೊಲ್ಲಾಪುರದಮ್ಮನಿಗೆ ಯುಗಾದಿ ಮಾರನೆಯ ದಿನ ಬೆಳಗ್ಗೆ ಆರತಿ ಮಾಡಿ ಬಲಿಕೊಡುತ್ತಾರೆ.

ಲಕ್ಷ್ಮಿ ರಂಗನಾಥ ಸ್ವಾಮಿಯ ದೇವಸ್ಥಾನದ ಹಿಂದಿರುವ ವೀರಗಲ್ಲು ವಿಜಯನಗರದ ಕಾಲದಾಗಿದೆ.ಈ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಎಡಗೈಯಲ್ಲಿ ಲಗಾಮು ಹಿಡಿದು

ಬಲಗೈಯಲ್ಲಿ ಕಠಾರಿಯನ್ನು ಮೇಲೆತ್ತಿ ಹಿಡಿದಿರುತ್ತಾನೆ. ವೀರನ ತಲೆಯ ಮುಡಿಯನ್ನು ಕುಚ್ಚಾಗಿ ಕಟ್ಟಲಾಗಿದೆ, ಕೈಕಾಲುಗಳಿಗೆ ಕಡಗ, ಕೊರಳಿಗೆ ವಿವಿಧ ರೀತಿಯ ಆಭರಣಗಳನ್ನು ಧರಿಸಿರುತ್ತಾರೆ. ಕುದುರೆಗೂ ವಿವಿಧ ಆಭರಣಗಳನ್ನು ಹಾಕಿರುತ್ತಾರೆ. ವೀರನ ಹಿಂಭಾಗದಲ್ಲಿ ಬೆಳ್ಳಿಯ ಕೊಡೆ ಹಿಡಿದು ನಿಂತ ವೀರನಾಗಿ ಇರುವುದರಿಂದ ಇದು ಒಂದು ರಾಜ್ಯ ಪ್ರಮುಖ ವೀರಗಲ್ಲು ಎಂದು ತಿಳಿಯಬಹುದು. ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ.

ಇತಿಹಾಸ

ಈ ಗ್ರಾಮದಲ್ಲಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯು ನೆಲೆಸಿರುವ ಹಿನ್ನೆಲೆ ಏನೆಂದರೆ ನೂರು ವರ್ಷಗಳ ಹಿಂದೆ ಗುಬ್ಬಿ ತಾಲೂಕಿನ ಮಂಚಲ ದೊರೆ ಭಕ್ತಾದಿಗಳು ಈ ಮಾರ್ಗವಾಗಿ ತಿರುಪತಿಗೆ ಗರ್ಭಿಣಿಯೊಂದಿಗೆ ಹೋಗುವಾಗ ಸಂಜೆಯಾದದರಿಂದ ಕಾಳಾಪುರ ಗ್ರಾಮದ ಒಂದು ಕಲ್ಲು ಮಂಟಪದಲ್ಲಿ ರಾತ್ರಿ ತಂಗಿದ್ದಾಗ ಗರ್ಭಿಣಿಗೆ ಪ್ರಸವ ವೇದನೆಯಾಗಿ ತಿರುಪತಿಗೆ ಹೋಗಲು ಸಾಧ್ಯವಿಲ್ಲವಾದಾಗ ಆಕೆಯ ಕನಸಿನಲ್ಲಿ ದೇವರು ಪ್ರತ್ಯಕ್ಷವಾಗಿ ನೀನು ತಲೆ ಇಟ್ಟು ಮಲಗಿರುವ ಸ್ಥಳದಲ್ಲಿ ಕೂರ್ಮ ಅವತಾರದಲ್ಲಿ ಉದ್ಭವ ಮೂರ್ತಿಯಾಗಿ ನಾನಿದ್ದೇನೆ, ಇದೇ ಸ್ಥಳದಲ್ಲಿ ಸೇವಾದಿಗಳನ್ನು ನಡೆಸು ನಿನಗೆ ತಿರುಪತಿಗೆ ಹೋದ ಪುಣ್ಯ ಫಲ ಪ್ರಾಪ್ತಿ ಆಗುತ್ತದೆ, ಎಂದು ಕನಸಿನಲ್ಲಿ ಹೇಳಿತು ಆಗ ಯಾತ್ರಾತ್ರಿಗಳು ಈ ಗ್ರಾಮದ ಗೌಡರು ಮತ್ತು ಗ್ರಾಮಸ್ಥರಿಗೆ ಈ ವಿಷಯವನ್ನು ತಿಳಿಸಿ ಪೂಜಾ ಕೈಂಕರ್ಯಗಳನ್ನು ಮಾಡಿ ತಮ್ಮ ಊರಿಗೆ ವಾಪಸ್ ಹೋದರು. ಗ್ರಾಮಸ್ಥರು ಈ ಕೂರ್ಮಾವತಾರದ ಉದ್ಭವ ಮೂರ್ತಿಗೆ ಕಲ್ಲು ಮಂಟಪವನ್ನು ನಿರ್ಮಿಸಿ, ಪೂಜಾ ಕಾರ್ಯಗಳನ್ನು ನಡೆಸುತ್ತಿದ್ದರು. ಇತ್ತೀಚೆಗೆ ಗ್ರಾಮಸ್ಥರು ಹಾಗೂ ಭಕ್ತರ ಸಹಕಾರದಿಂದ ಹೊಸದಾಗಿ ಭವ್ಯವಾದ ದೇವಸ್ಥಾನವನ್ನು ಕಟ್ಟಿಸಿ, ಈ ಗ್ರಾಮದ ತಿಮ್ಮಮ್ಮಳೆಂಬ ಬ್ರಾಹ್ಮಣ ಕುಟುಂಬದವರ ಕಾಲ ನಂತರ ಭಾಗಿರಥಮ್ಮನವರ ಮಕ್ಕಳು, ತೇರು ಮಲ್ಲಪ್ಪನವರ ವಂಶಸ್ಥರು ಧರ್ಮದರ್ಶಿಗಳಾಗಿ ನಿಂತು ಪ್ರತಿದಿನ ಸ್ವಾಮಿಗೆ ಪೂಜಾದೀಗಳನ್ನು ನಡೆಸುತ್ತಿದ್ದಾರೆ.

ಜಾತ್ರಾ ಮಹೋತ್ಸವ

ಕಾಳಾಪುರದ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಜಾತ್ರಾ ಮಹೋತ್ಸವವು ಪ್ರತಿ ವರ್ಷ ಸುಗ್ಗಿಯ ಕಾಲದ ಚೈತ್ರ ಮಾಸದ ಹೋಳಿ ಹುಣ್ಣಿಮೆಯ ಶುಭದಿನದಿಂದ ಐದು ದಿವಸಗಳ ಕಾಲ ಜಾತ್ರೆ ನಡೆಯುತ್ತದೆ. ಮೊದಲನೇ ದಿನದಂದು ಬೆಳಗ್ಗೆ ಸ್ವಾಮಿಗೆ ಪಂಚಾಮೃತ ಅಭಿಷೇಕ ಹಾಗೂ ಅನ್ನ ಸಂತರ್ಪಣೆ ನಡೆಯುತ್ತದೆ. ಸಾಯಂಕಾಲ ಸ್ವಾಮಿಯ ಉತ್ಸವ ಮೂರ್ತಿಯನ್ನು ಮಂಗಳವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಊರಿನ ಅರಳಿ ಕಟ್ಟೆಯ ಹತ್ತಿರ ಇರುವ ಹುತ್ತಕ್ಕೆ ಪೂಜೆ ಸಲ್ಲಿಸಿ, ಉತ್ತದ ಮಣ್ಣನ್ನು ಶೇಖರಣೆ ಮಾಡಿಕೊಂಡು ಕುಂಬಾರನ ಮನೆಯಲ್ಲಿ ಹರಣಿಗೆ ಪೂಜೆ ಮಾಡಿ ಅವರ ಮನೆಯಿಂದ ದೀಪ ಮಡಿಕೆ ಹಾಗೂ ಮುಚ್ಚಳವನ್ನು ಪಡೆದುಕೊಂಡು, ಕೊನೆಯದಾಗಿ ಅಕ್ಕಸಾಲಿಗರ ಮನೆಗೆ ಹೋಗಿ, ಗರುಡ ಧ್ವಜಕ್ಕೆ ಪೂಜೆ ಮಾಡಿ ಕರುಣ ಗರುಡ ಧ್ವಜವನ್ನು ಪಡೆದುಕೊಂಡು ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಬಂದು ಗರುಡ ಧ್ವಜ ಆರೋಹಣ ಕಾರ್ಯಕ್ರಮವನ್ನು ನೆರವೇರಿಸುವರು. ನಂತರ ಯಾಗ ಶಾಲಾ ಪ್ರವೇಶ ಮಾಡಿ ಹುತ್ತದ ಮಣ್ಣಿಗೆ ಗೊಬ್ಬರವನ್ನು ಮಿಶ್ರಣ ಮಾಡಿ ೯ ಮುಚ್ಚಳಗಳಲ್ಲಿ ನವಧಾನ್ಯಗಳನ್ನು ಹಾಕಿ ಮೊಳಕೆ ಬರುವವರೆಗೂ ನೀರು ಹಾಕುವರು ಈ ಸೇವೆಗೆ ಅಂಕುರಾರ್ಪಣೆ ಸೇವೆ ಎನ್ನುತ್ತಾರೆ.

ಎರಡನೇ ದಿನ ಬೆಳಗ್ಗೆ ಸ್ವಾಮಿಗೆ ಪಂಚಾಮೃತ ಅಭಿಷೇಕ ಹಾಗೂ ಅನ್ನಸಂತರ್ಪಣೆ ಮಾಡುತ್ತಾರೆ. ಸಾಯಂಕಾಲ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಉತ್ಸವವನ್ನು ಸೇವಾಕರ್ತರುಗಳಾದ ವೈಷ್ಯರ ಮನೆಯಲ್ಲಿ ಪೂಜೆ, ಅಕ್ಕಸಾಲಿಗರ ಮನೆಯಲ್ಲಿ ಪೂಜೆ ಗೌಡರ ಮನೆಯಲ್ಲಿ ಪೂಜೆ ಹಾಗೂ ಈ ಜಾತ್ರೆಯ ಉಸ್ತುವಾರಿ, ಬಣಿಗಾರರ ಮನೆಯಲ್ಲಿ ಪೂಜೆ ಮಾಡಿಕೊಂಡು ದೇವಸ್ಥಾನಕ್ಕೆ ಬಂದು ಶಾಸ್ತ್ರೋಕ್ತವಾಗಿ ಶ್ರೀದೇವಿ ಭೂದೇವಿ ಸಮೇತ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿಯ ಕಲ್ಯಾಣೋತ್ಸವವನ್ನು ನೆರವೇರಿಸುತ್ತಾರೆ.

ಮೂರನೇ ದಿನ ಬ್ರಹ್ಮ ರಥೋತ್ಸವದ ದಿನ ಬೆಳಗ್ಗೆಯಿಂದಲೇ ಎಲ್ಲಾ ಭಕ್ತರು ಜಾತ್ರೆಗೆ ಆಗಮಿಸಿ ಭಕ್ತರು ತಾವು ಬ್ರಹ್ಮರಥಕ್ಕೆ ಹರಕೆ ಮಾಡಿಕೊಂಡ ರೀತಿಯಲ್ಲೇ ರಥದ ಎತ್ತರದಷ್ಟು ಹೂವಿನ ಹಾರಗಳನ್ನು ಹಾಕಿ ರಥವನ್ನು ಸಿಂಗಾರ ಗೊಳಿಸುತ್ತಾರೆ. ಮಧ್ಯಾಹ್ನ 1 ಗಂಟೆಗೆ ಪಟೇಲ್ ರಂಗೇಗೌಡರ ಮನೆಯಿಂದ ಪೂರ್ಣ ಕುಂಭ ಕಳಸ ಹಾಗೂ ಗ್ರಾಮದ ಹೆಣ್ಣು ಮಕ್ಕಳಿಂದ ಆರತಿ ಉತ್ಸವದೊಂದಿಗೆ ದೇವಸ್ಥಾನಕ್ಕೆ ಆಗಮಿಸುತ್ತಾರೆ. ಆಗ ಚಿನ್ನದ ಒಡವೆಗಳಿಂದ ಸಿಂಗಾರಗೊಂಡ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಉತ್ಸವ ಮೂರ್ತಿಯನ್ನು ಗರುಡ, ಆನೆ, ಕುದುರೆಗಳ, ಕಂಚಿನ ಮೂರ್ತಿಗಳನ್ನು ಮೆರವಣಿಗೆಯಲ್ಲಿ ತಂದು ರಥದಲ್ಲಿ

ಪ್ರತಿಷ್ಠಾಪಿಸುತ್ತಾರೆ.ಈ ಶುಭ ಸಮಯದಲ್ಲಿ ನೀಲಾಕಾಶದಲ್ಲಿ ಬ್ರಹ್ಮರಥಕ್ಕೆ ಗರುಡ ಸ್ವಾಮಿ ಮೂರು ಸುತ್ತು ಪ್ರದಕ್ಷಿಣೆ ಹಾಕಿದ ಮೇಲೆ ಭಕ್ತರು ಭಾವಪರವಶರಾಗಿ ಹರ್ಷೋದ್ಗಾರಗಳಿಂದ ರಥವನ್ನು ಎಳೆಯುತ್ತಾ, ದವನ ,ಬಾಳೆಹಣ್ಣುಗಳನ್ನು ತೇರಿಗೆ ಎಸೆಯುತ್ತ ತಮ್ಮ ಹರಕೆಯನ್ನು ತೀರಿಸುತ್ತಾರೆ. ಈ ಜಾತ್ರೆಗೆ ಬಂದ ಭಕ್ತಾದಿಗಳಲ್ಲಿ ಸ್ಥಿತಿವಂತರು ಹಾಗೂ ದಾನಿಗಳು ಪಾನಕ ಕೋಸಂಬರಿ ಮತ್ತು ಅನ್ನ ಸಂತರ್ಪಣೆ ಮಾಡುತ್ತಾರೆ. ಅಂದು ರಾತ್ರಿ ಹೋಳಿ ಹುಣ್ಣಿಮೆಯ ಬೆಳದಿಂಗಳಲ್ಲಿ ವಿದ್ಯುತ್ ದೀಪಗಳಿಂದ ಅಲಂಕೃತವಾದ ಹೂವಿನ ಪಲ್ಲಕ್ಕಿ ಉತ್ಸವ ಮಾಡುತ್ತಾರೆ. ರಾತ್ರಿಯೆಲ್ಲ ಭಕ್ತಾದಿಗಳ ಮನರಂಜನೆಗೆ ಗ್ರಾಮಸ್ಥರಿಂದ ಪೌರಾಣಿಕ ನಾಟಕ ಪ್ರದರ್ಶನವನ್ನು ಏರ್ಪಡಿಸುತ್ತಾರೆ.

ನಾಲ್ಕನೇ ದಿನ ಭಕ್ತಾದಿಗಳಿಂದ ಪಂಚಾಮೃತ ಅಭಿಷೇಕ ಹಾಗೂ ಅನ್ನ ಸಂತರ್ಪಣೆ ಮಧ್ಯಾಹ್ನ ಉಂಡೆ ಮಂಡೆ ಮುಡಿ ತೆಗೆಯುವ ಕಾರ್ಯಕ್ರಮ ಅಂದರೆ ಹರಕೆ ಮಾಡಿಕೊಂಡು ಒಕ್ಕಲುಗಳು ನೆಂಟರಿಷ್ಟರುಗಳು ಭಾಗವಹಿಸುತ್ತಾರೆ. ಸಂಜೆ ಸ್ವಾಮಿಗೆ ಶಯನೋತ್ಸವ ಸೇವೆಯನ್ನು ಮಾಡುತ್ತಾರೆ. ರಾತ್ರಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಗೆ ಪುಷ್ಪಾಲಂಕಾರ ಮಾಡಿ ಊರಿನ ರಾಜಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ.

ಐದನೇ ದಿನ ಕೊನೆಯ ದಿನ ಉತ್ಸವ ಮೂರ್ತಿಗೆ ಅಭಾವ ವೃತ ಸ್ನಾನ ಎಂದರೆ ತೀರ್ಥ ಸ್ನಾನ ಹಾಗೂ ಸ್ವಾಮಿಯ ಮೂಲ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ ಮಾಡಿಸಿ ಭವ್ಯವಾದ ಚಿನ್ನದ ಆಭರಣಗಳಿಂದ ಹೂಗಳಿಂದ ಅಲಂಕಾರ ಮಾಡಿ ಮಹಾಮಂಗಳಾರತಿ ಮಾಡುತ್ತಾರೆ.

ನಂತರ ಭಕ್ತಾದಿಗಳಿಂದ ಅನ್ನಸಂತರ್ಪಣೆ ನಡೆಯುತ್ತದೆ. ಐದು ದಿವಸಗಳ ಕಾಲ ಆಗಮಿಕರು, ಪಂಡಿತರು ಆಗಮಿಸಿ ಹಗಲು ರಾತ್ರಿ ಪೂಜೆ ಪುನಸ್ಕಾರ ಹೋಮ ಹವನ ಮಾಡಿದವರಿಗೆ ಸಂಭಾವನೆ ಮತ್ತು ವಸ್ತ್ರದಾನ ಮಾಡಿ ಕಳಿಸಿಕೊಡುತ್ತಾರೆ.

ಮೊದಲನೆಯ ದಿನ ಯಾಗ ಶಾಲೆಯ ಅಂಕುರಾರ್ಪಣೆ ಸೇವೆಯಲ್ಲಿ ಬಿತ್ತನೆ ಮಾಡಿದ ನವಧಾನ್ಯಗಳಲ್ಲಿ ಹೆಚ್ಚು ಮೊಳಕೆ ಬಂದಿರುವುದನ್ನು ಖಾತ್ರಿ ಮಾಡಿಕೊಂಡು ದೇವಸ್ಥಾನದ ಅರ್ಚಕರು ಸ್ವಾಮಿಯ ಸನ್ನಿಧಿಯಲ್ಲಿ ಘೋಷಣೆ ಮಾಡುವರು ಇಲ್ಲಿ ನೆರೆದಿರುವ ರೈತ ಬಾಂಧವರುಗಳು ಹೆಚ್ಚು ಮೊಳಕೆ ಬಂದಿರುವ ಧಾನ್ಯಗಳ ಬಿತ್ತನೆ ಬೀಜಗಳನ್ನು ಕಾಳಾಪುರ ಗ್ರಾಮದ ಪ್ರಗತಿಪರ ರೈತರಿಂದ ಕೊಂಡು ತಮ್ಮ ಹೊಲಗಳಲ್ಲಿ ಬಿತ್ತನೆ ಮಾಡಲು ಅಣಿಯಾಗುತ್ತಾರೆ. ಈ ಶುಭ ಕಾರ್ಯವನ್ನು ಕಾಳಾಪುರ ಗ್ರಾಮದ ಧರ್ಮದರ್ಶಿಗಳು, ಗೌಡರು, ಯಜಮಾನರು, ಪಣಿಗಾರರು, ರೈತರು, ಅರ್ಚಕರು, ಒಕ್ಕಲುಗಳು, ಕೈವಾಡದವರು, ಗ್ರಾಮಸ್ಥರು ಹಾಗೂ ಅಕ್ಕಪಕ್ಕದ ಗ್ರಾಮಗಳ ಸಕಲ ಭಕ್ತಾದಿಗಳು ಎಲ್ಲರೂ ಸೇರಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಬ್ರಹ್ಮರಥೋತ್ಸವಕ್ಕೆ ತಮ್ಮ ತನು ಮನ ಧನವನ್ನು ಅರ್ಪಿಸಿ ಸಂತೋಷದಿಂದ ಭಾಗವಹಿಸಿ ಜಾತ್ರೆಯನ್ನು ಸಂಪನ್ನಗೊಳಿಸುತ್ತಾರೆ.

**ವಕ್ತೃಗಳು**

**ಹೆಸರು ವಯಸ್ಸು. ಊರು**

1. ಶಂಕರನಾರಾಯಣರಾವ್ 78ವರ್ಷಗಳು ಕಾಳಾಪುರ
2. ನರಸಿಂಹಮೂರ್ತಿ 67 ವರ್ಷಗಳು ಕಾಳಾಪುರ
3. ಕೆಂಪಜ್ಜಿ. 72 ವರ್ಷಗಳು ಕಾಳಾಪುರ